ಸಿಸಿ ನಂ. 36/2024
ಸಿ.ಡಬ್ಲೂ-9 ಪಿ.ಡಬ್ಲೂ: 6

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.

| | | |
|---|---|---|
| ಸಾಕ್ಷಿದಾರನ ಹೆಸರು | : | ರಮೇಶ ಹಡಪದ |
| ತಂದೆ ಹೆಸರು | : | ಈರಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಮುಖ್ಯ ಪೇದೆ |
| ವಾಸ ಸ್ಥಳ | : | ಸಿಂದಗಿ |

ದಿನಾಂಕ 29-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ: ಸರಕಾರಿ ಸಹಾಯಕ ಅಭಿಯೋಜಕ ರವರಿಂದ.**

ನಾನು ಸಿಂದಗಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಎಂದು 2021 ರಿಂದ ಇಲ್ಲಿಯ ವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ.13-09-2023 ರಂದು ಸಿಂದಗಿ ಪೋಲಿಸ್ ಠಾಣೆಯಲ್ಲಿ ನಾನು ಕರ್ತವ್ಯಯದಲ್ಲಿದ್ದಾಗ ಸಂಜೆ 6-30 ಗಂಟೆ ಸುಮಾರಿಗೆ ಚಾ.ಸಾ.1, ರವರು ನನ್ನ ಮುಂದೆ ಹಾಜರಾಗಿ ಗಣಕಿ ಕೃತ ದೂರನ್ನು ನೀಡಿದ್ದು, ಅದನ್ನು ಸ್ವೀಕರಿಸಿ ಠಾಣಾ ಗುನ್ನಾ ನಂ.204/2023 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವ.ವನ್ನು ನ್ಯಾಯಾಲಯಕ್ಕೆ ಮತ್ತು ಅದರ ಪ್ರತಿಯನ್ನು ಹಿರಿಯ ಅಧಿಕಾರಿಗಳಿಗೆ ಕಳುಹಿಸಿರುತ್ತೆನೆ. ದೂರನ್ನು ಗುರುತಿಸಿದ್ದು ಅದು ಈಗಾಗಲೇ ನಿ.ಪಿ. 1 ಎಂದು ಗುರುತಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ. 1 ಬಿ ಎಂದು, ಪ್ರ.ವ.ವ.ವನ್ನು ನಿ.ಪಿ. 5 ಎಂದು, ಸಾಕ್ಷಿ ಸಹಿಯನ್ನು ನಿ.ಪಿ. 5 ಎ ಎಂದು, ಗುರುತಿಸಲಾಯಿತು.

3. ಮರು ದಿನ ಬೆಳಿಗ್ಗೆ 9–00 ರಿಂದ 10–00 ಗಂಟೆಯ ಸುಮಯದಲ್ಲಿ ಗುನ್ನಾ ಸ್ಥಳದಲ್ಲಿ ಚಾ.ಸಾ. 2 ಮತ್ತು 3 ರವರ ಸಮಕ್ಷಮ ಗುನ್ನಾ ಜಾಗದ ಪಂಚನಾಮೆಯನ್ನು ಮಾಡಿರುತ್ತೇನೆ.ಅದು ಈಗಾಗಲೇ ನಿ.ಪಿ. 2 ಎಂದು ಗುರುತಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ. 2 ಬಿ ಎಂದು ಗುರುತಿಸಲಾಯಿತು. ಫೊಟೊವನ್ನು ಈಗಾಗಲೇ ನಿ.ಪಿ. 3 ಎಂದು ಗುರುತಿಸಲಾಗಿರುತ್ತದೆ. ಅದೇ ದಿನ ಚಾ.ಸಾ.6 ಮತ್ತು 7 ರವರ ಹೇಳೀಕೆಯನ್ನು ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಚಾ.ಸಾ. 10 ರವರಿಗೆ ಹಸ್ತಾಂತರಿಸಿರುತ್ತೇನೆ.

<u>ಪಾಟೀ ಸವಾಲು ಶ್ರೀ.ಎನ್.ಎಸ್.ಬಿ. ಆರೊಪಿತರ ಪರ ವಕೀಲರಿಂದ</u>

4. ಚಾ.ಸಾ. 1 ರವರು ಸುಳ್ಳು ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ನಾನು ಖೊಟ್ಟಿಯಾಗಿ ಗುನ್ನಾ ಜಾಗದ ಪಂಚನಾಮೆಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.6 ಮತ್ತು 7 ರವರ ಹೇಳೀಕೆಯನ್ನು ನಾನು ಖೊಟ್ಟಿಯಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೆ.ಕೆ.ಸರಿ. ಅದೇ**

ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು

**ಜೆ.ಎಮ್.ಎಫ್.ಸಿ. ಸಿಂದಗಿ**